# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ


**(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)**

ಕುಲಸಚಿವರ ಕಛೇರಿ, ಜ್ಞಾನಶಕ್ತಿ ಆವರಣ, Registrar Office, Torvi

ವಿಜಯಪುರ ☎:08352–229051 www.kswu.ac.in **Fax:** 08352 -229057


ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್–100/2017–18/2017 ದಿನಾಂಕ:16–9–2017

ಗೆ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ:** ದಿನಾಂಕ: 06–09–2017 ರಂದು ಮುಂಜಾನೆ 11:00 ಗಂಟೆಗೆ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣ, ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ: 06–09–2017 ರಂದು ಮುಂಜಾನೆ 11:00 ಗಂಟೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

– ಸಹಿ –
**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

**ಅಡಕ: ನಡವಳಿಗಳು 1 ರಿಂದ 17 ಪುಟಗಳು**

**ಪ್ರತಿಗಳು:–**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಸರಕಾರದ ಪ್ರದಾನ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20-6-2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ ವಿಜ್ಞಾನ ನಿಕಾಯ. | ಸದಸ್ಯರು | 4-11-2016 | 3-11-2017 |
| 5. | 1(ಇ) | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | ಸದಸ್ಯರು | 11-04-2017 | 10-04-2020 |
| 6. | 1(ಇ) | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | ಸದಸ್ಯರು | 11-04-2017 | 10-04-2020 |
| 7. | 1(ಎಫ್) | ಶ್ರೀ ನಾನಾಗೌಡ ಹಿಪ್ಪರಗಿ | ಸದಸ್ಯರು | 02-12-2016 | 01-12-2017 |
| 8. | 1(ಎಫ್) | ಶ್ರೀಮತಿ ಬುಷಿರಾ ಬೇಗಂ | ಸದಸ್ಯರು | 02-12-2016 | 01-12-2017 |
| 9. | 1(ಎಫ್) | ಡಾ. ಬಿರಾದಾರ ಅರವಿಂದಕುಮಾರ | ಸದಸ್ಯರು | 02-12-2016 | 01-12-2017 |
| 10. | 1(ಎಫ್) | ಡಾ. ಹುಮೇರಾ ಸುಲ್ತಾನ | ಸದಸ್ಯರು | 02-12-2016 | 01-12-2017 |
| 11. | 1(ಜಿ) | ಡಾ.ಸತ್ಯಾನಂದ ಪಾತ್ರೋಟ | ಸದಸ್ಯರು | 19-02-2015 | 18-02-2018 |
| 12. | 1(ಜಿ) | ಶ್ರೀ.ಎಂ.ಎಲ್.ಶಾಂತಗಿರಿ | ಸದಸ್ಯರು | 19-02-2015 | 18-02-2018 |
| 13. | 1(ಜಿ) | ಡಾ.ಫರ್ಜಾನಾ.ಎಂ | ಸದಸ್ಯರು | 19-02-2015 | 18-02-2018 |
| 14. | 1(ಜಿ) | ಡಾ.ಸುಜಾತಾ ಎಸ್ ಜಂಗಮಶೆಟ್ಟಿ | ಸದಸ್ಯರು | 19-02-2015 | 18-02-2018 |
| 15. | 1(ಜಿ) | ಶ್ರೀ.ಆರ್.ಸಿ.ಪಾಟೀಲ | ಸದಸ್ಯರು | 19-02-2015 | 18-02-2018 |
| 16. | 1(ಜಿ) | ಶ್ರೀ.ರವೀಂದ್ರ ಭಾವಿಕಟ್ಟಿ | ಸದಸ್ಯರು | 19-02-2015 | 18-02-2018 |
| 17. | 1(ಹೆಚ್) | ನಾಮನಿರ್ದೇಶನಾಗಿರುವುದಿಲ್ಲ | | | |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | -- | -- |
| 22. | ಪ್ರಕರಣ 18(2) | ಪ್ರೊ.ವಿ.ವಿ.ಮಳಗಿ, ಕುಲಸಚಿವರು(ಮೌ) | ಸದಸ್ಯರು | 14-7-2016 | |
| 23. | ಪ್ರಕರಣ 17(2) | ಪ್ರೊ. ಕೆ.ಪಿ.ಶ್ರೀನಾಥ್, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 18-06-2016 | |

# ದಿನಾಂಕ:06-09-2017 ರಂದು ಮುಂಜಾನೆ 11:00ಗಂಟೆಗೆ, ಸಿಂಡಿಕೇಟ್ ಸಭಾಂಗಣ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## ಸಭೆಗೆ ಹಾಜರಾದ ಸದಸ್ಯರು

1. ಕುಲಪತಿಗಳು(ಪ್ರಭಾರ) :ಸಭಾಧ್ಯಕ್ಷರು
2. ಪ್ರೊ. ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ-ವಿಜ್ಞಾನ ನಿಕಾಯ : ಸದಸ್ಯರು
3. ಶ್ರೀಮತಿ ಅರುಣಾಕುಮಾರಿ.ಎಸ್.ಕೆ : ಸದಸ್ಯರು
4. ಶ್ರೀಮತಿ ಅನಘಾ ಅಚ್ಯುತ್ ಲಿಮಯೆ : ಸದಸ್ಯರು
5. ಶ್ರೀ ನಾನಾಗೌಡ ಹಿಪ್ಪರಗಿ : ಸದಸ್ಯರು
6. ಡಾ.ಬಿರಾದಾರ ಅರವಿಂದಕುಮಾರ : ಸದಸ್ಯರು
7. ಡಾ.ಸತ್ಯಾನಂದ ಪಾತ್ರೋಟ : ಸದಸ್ಯರು
8. ಡಾ.ಫರ್‌ಜಾನಾ ಎಂ : ಸದಸ್ಯರು
9. ಡಾ.ಸುಜಾತಾ ಜಂಗಮಶೆಟ್ಟಿ : ಸದಸ್ಯರು
10. ಶ್ರೀ ಆರ್.ಬಿ.ಭಾವಿಕಟ್ಟಿ : ಸದಸ್ಯರು
11. ಶ್ರೀ ಆರ್.ಸಿ.ಪಾಟೀಲ : ಸದಸ್ಯರು
12. ಪ್ರೊ.ವಿ.ವಿ.ಮಳಗಿ, ಕುಲಸಚಿವರು (ಮೌಲ್ಯಮಾಪನ) : ಸದಸ್ಯರು
13. ಪ್ರೊ.ಕೆ.ಪಿ.ಶ್ರೀನಾಥ, ಕುಲಸಚಿವರು : ಸದಸ್ಯ ಕಾರ್ಯದರ್ಶಿ

## ಸಭೆಗೆ ಗೈರು ಹಾಜರಾದ ಸದಸ್ಯರು

1. ಪ್ರೊ. ಸಬಿಹಾ, ಕುಲಪತಿಗಳು : ಸದಸ್ಯರು
2. ಶ್ರೀ.ಡಿ.ಎಂ.ನಡವಣಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ : ಸದಸ್ಯರು
3. ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ : ಸದಸ್ಯರು
4. ಶ್ರೀಮತಿ ಬುಷಿರಾ ಬೇಗಂ : ಸದಸ್ಯರು
5. ಡಾ.ಹುಮೆರಾ ಸುಲ್ತಾನ : ಸದಸ್ಯರು
6. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
7. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
8. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
9. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
10. ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು : ಸದಸ್ಯರು

ಅನಿವಾರ್ಯ ಕಾರಣಗಳಿಂದ ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಇವರು ತಮ್ಮಗೆ ದಿನಾಂಕ:6-9-2017 ರಂದು ಜರುಗಲಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ವಹಿಸಲು ತಿಳಿಸಿರುವ ವಿಷಯವನ್ನು ಮಾನ್ಯ ಕುಲಸಚಿವರು ಸಭೆಯಲ್ಲಿರುವ ಎಲ್ಲ ಸಿಂಡಿಕೇಟ್ ಸದಸ್ಯರಿಗೆ ತಿಳಿಸಿದರು. ಹಾಗೂ ಸಭೆಗೆ ಅವರನ್ನು ಸ್ವಾಗತಿಸಿದರು. ಮುಂದುವರೆದು ಕಾರ್ಯಸೂಚಿಯನ್ನು ಮಂಡಿಸಿದರು.

## **ದಿನಾಂಕ:06-09-2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

- ದಿನಾಂಕ: 12-07-2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

  **ನಿರ್ಣಯ:-**

  1. **ನಡವಳಿ ಸಂಖ್ಯೆ: 17 ರಲ್ಲಿ ಸಿಂಧನೂರು ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ & ಅರ್ಥಶಾಸ್ತ್ರ ಅಧ್ಯಯನ ವಿಭಾಗಗಳನ್ನು ಪ್ರಾರಂಭಿಸಲು ಅವರ ಬೇಡಿಕೆ ಇದ್ದು, ಈ ಬಾರಿ ಅದರ 2017-18ನೇ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿನಿಯರ ಪ್ರವೇಶಾತಿ ಸಂಖ್ಯೆ, ವಿಶ್ವವಿದ್ಯಾನಿಲಯದ ಸಂಪನ್ಮೂಲದ ಇತಿಮಿತಿ ಗಮನಿಸಿ, 2018-19ನೇ ಶೈಕ್ಷಣಿಕ ಸಾಲಿನಿಂದ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲು ಸಭೆಯಲ್ಲಿ ಅನುಮೋದಿಸಲಾಯಿತು.**

  2. **ದಿನಾಂಕ:12-7-2017ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

- ದಿನಾಂಕ: 20-05-2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.

  **ನಿರ್ಣಯ: ದಿನಾಂಕ: 20-05-2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಒಪ್ಪಿಕೊಳ್ಳಲಾಯಿತು.**

### **ದಿನಾಂಕ: 12-07-2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮುಂದೂಡಿದ ವಿಷಯ**

## ***ಸಿಂಡಿಕೇಟ್ ಐಟಂ ಸಂಖ್ಯೆ : 01***

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಆರ್.ಬಿ.ಭಾವಿಕಟ್ಟಿ ಅವರು ಈ ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.**

ದಿನಾಂಕ:29-2-2012ರಂದು ನಿವೃತ್ತಿಯಾದ ಪ್ರಾಧ್ಯಾಪಕ ಆರ್.ಎಸ್.ಎಲಿಯವರ 16 ತಿಂಗಳ ವೇತನ ಹಾಗೂ ನಿವೃತ್ತಿ ನಂತರದ ಇತರೆ ಸೌಲಭ್ಯಗಳ ಬಿಡುಗಡೆ ಕುರಿತು ದಿನಾಂಕ:12-7-2017ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮುಂದೂಡಲಾಯಿತು.

**ನಿರ್ಣಯ:- ಸುದೀರ್ಘವಾಗಿ ಚರ್ಚಿಸಿ ಈ ವಿಷಯ ಕುರಿತು, ಪ್ರಸ್ತಾವನೆಯನ್ನು ಸರಕಾರದ ಅನುಮತಿ ಪಡೆಯಲು ತೀರ್ಮಾನಿಸಲಾಯಿತು.**

## **ಹೊಸ ವಿಷಯಗಳು:**

**ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

# *ಸಿಂಡಿಕೇಟ್ ಐಟಂ ಸಂಖ್ಯೆ : 02*

**ವಿಷಯ:** ಶೈಕ್ಷಣಿಕ 2017–18 ನೇ ಸಾಲಿನ ಸಂಲಗ್ನತೆ ಕುರಿತು.

*ಐಟಂ ಸಂಖ್ಯೆ: 02* (ಅ) ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ *GVR EDUCATION SOCIETY BANGALORE,* ಇವರು **ಶೈಕ್ಷಣಿಕ 2017–18 ನೇ ಸಾಲಿಗೆ** BFT, MFT, Diploma in Fashion Design & Botique Management ನ ಹೊಸ ಕೋರ್ಸುಗಳ ಸಂಲಗ್ನತೆ ಮಂಜೂರಾತಿಗಾಗಿ ತಡವಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಉಲ್ಲೇಖಿತ 03 ರ ಸಿಂಡಿಕೇಟ್ ಸಭೆಯಲ್ಲಿ ಇವರ ಪ್ರಸ್ತಾವನೆ ಮಂಡಿಸಲಾಗಿದ್ದು, ಸದರಿ ಸಂಸ್ಥೆಗೆ ತಪಾಸಣೆಗಾಗಿ ಸ್ಥಾನಿಕ ವಿಚಾರಣಾ ಸಮಿತಿಯನ್ನು ರಚಿಸಲು ಸಭೆಯಲ್ಲಿ ಅನುಮೋದಿಸಲಾಯಿತ್ತು. ಕಾರಣ ಸಮಿತಿಯು **ದಿನಾಂಕ:09–08–2017 ರಂದು ತಪಾಸಣೆ ಮಾಡಿ ಶಿಫಾರಸಿನೊಂದಿಗೆ ವರದಿಯನ್ನು ಸಲ್ಲಿಸಿದ್ದು,** ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ದಿನಾಂಕ: 19–8–2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದಿಸಲಾಗಿದೆ. ಈಗ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:– GVR EDUCATION SOCIETY BANGALORE, ಇವರು ಶೈಕ್ಷಣಿಕ 2017–18 ನೇ ಸಾಲಿಗೆ BFT, MFT, Diploma in Fashion Design & Botique Management ನ ಹೊಸ ಕೋರ್ಸುಗಳ ಸಂಲಗ್ನತೆ ಮಂಜೂರಾತಿಗಾಗಿ, ಸ್ಥಾನಿಕ ವಿಚಾರಣಾ ಸಮಿತಿಯ ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ಅನುಮೋದಿಸಲಾಯಿತು."*

*ಐಟಂ ಸಂಖ್ಯೆ: 02* (ಆ) ಮುಖ್ಯಸ್ಥರು ಮಹಿಳಾ ಅಧ್ಯಯನ ವಿಭಾಗ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ಇವರು ಉಲ್ಲೇಖಿತ 02 ರನ್ವಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಕಲಬುರಗಿ ಈ ಕಾಲೇಜಿಗೆ ವಿದ್ಯಾರ್ಥಿಗಳ ಬೇಡಿಕೆ ಇರುವುದರಿಂದ ಬಿ.ಎ ಕೋರ್ಸುಗೆ **ಮಹಿಳಾ ಅಧ್ಯಯನ, ಐಚ್ಛಿಕ ಕನ್ನಡ, ರಾಜ್ಯಶಾಸ್ತ್ರ** ಈ ವಿಷಯಗಳ ಕಾಂಬಿನೇಶನ್‌ನ್ನು ಹೊಸದಾಗಿ ಶೈಕ್ಷಣಿಕ 2017–18 ನೇ ಸಾಲಿಗೆ ಅನ್ವಯವಾಗುವಂತೆ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕಾರಣ ಸಭೆಯಲ್ಲಿ ಅನುಮೋದಿಸಿದರೆ ಈಗಾಗಲೇ ಸದರಿ ಕಾಲೇಜಿಗೆ ಮಂಜೂರಾದ ವಿದ್ಯಾರ್ಥಿಗಳ ಪ್ರಮಾಣ ಸಂಖ್ಯೆ ಅಡಿಯಲ್ಲಿಯೇ ಈ ಕಾಂಬಿನೇಶನ್‌ಗೆ ವಿದ್ಯಾರ್ಥಿಗಳ ಪ್ರವೇಶಾತಿ ಪಡೆಯಲು ನೀಡಬಹುದಾಗಿದ್ದು, ದಿನಾಂಕ: 19–8–2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ಮಂಡಿಸಿ ಅನುಮೋದಿಸಲಾಗಿದೆ. ಈಗ ಸಿಂಡಿಕೇಟ್ ಸಭೆಯಲ್ಲಿ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:–* **ಶೈಕ್ಷಣಿಕ 2017–18 ನೇ ಸಾಲಿನಿಂದ ಅನ್ವಯವಾಗುವಂತೆ ಬಿ.ಎ ಕೋರ್ಸಿಗೆ ಮಹಿಳಾ ಅಧ್ಯಯನ, ಐಚ್ಛಿಕ ಕನ್ನಡ, ರಾಜ್ಯಶಾಸ್ತ್ರ ಈ ವಿಷಯಗಳ ಕಾಂಬಿನೇಶನ್‌ನ್ನು ಹೊಸದಾಗಿ ನೀಡಲು ಅನುಮೋದಿಸಲಾಯಿತು.**

*ಐಟಂ ಸಂಖ್ಯೆ: 02* (ಇ) ಗುಜ್ಜಮ್ಮ ಶಿಕ್ಷಣ ಮಹಿಳಾ ಮಹಾವಿದ್ಯಾಲಯ ಭಾಲ್ಕಿ ಮತ್ತು ಆದಿತ್ಯ ಮಹಿಳಾ ಪದವಿ ಮಹಾವಿದ್ಯಾಲಯ ಭಾಲ್ಕಿ ಈ ಕಾಲೇಜುಗಳಿಗೆ ಉಲ್ಲೇಖಿತ 04 ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ, 2017–18 ನೇ ಸಾಲಿಗೆ ತಡವಾಗಿ ಮುಂದುವರಿಕೆ ಪ್ರಸ್ತಾವನೆ ಸಲ್ಲಿಸಿದ್ದಕ್ಕೆ ರೂ.40,000/–ಗಳ ದಂಡವನ್ನು ವಿಧಿಸಿ ಮರು ತಪಾಸಣೆ ಮಾಡಲು ತಿಳಿಸಲಾಗಿತ್ತು, ಅದರಂತೆ ಸದರಿ ಕಾಲೇಜುಗಳು ದಿನಾಂಕ:07–07–2017 ರಂದು ರೂ.40,000/–ಗಳ ದಂಡವನ್ನು ಭರಿಸಿದಕ್ಕೆ ಸ್ಥಾನಿಕ ವಿಚಾರಣಾ ಸಮಿತಿಯು **ದಿನಾಂಕ:02–**

**08–2017 ರಂದು ಮರು ತಪಾಸಣೆ ಮಾಡಿ ಶಿಫಾರಸಿನೊಂದಿಗೆ ವರದಿಯನ್ನು ಸಲ್ಲಿಸಿರುತ್ತಾರೆ.** ಸದರಿ ಕಾಲೇಜುಗಳಿಗೆ ಮುಂದುವರಿಕೆ ಸಂಯೋಜನೆ ನೀಡಲು ದಿನಾಂಕ: 19–8–2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ಮಂಡಿಸಿ ಅನುಮೋದಿಸಲಾಗಿದೆ. ಈಗ ಸಿಂಡಿಕೇಟ್ ಸಭೆಯಲ್ಲಿ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:–* **2017–18 ನೇ ಸಾಲಿಗೆ ಗುಜ್ಜಮ್ಮ ಶಿಕ್ಷಣ ಮಹಿಳಾ ಮಹಾವಿದ್ಯಾಲಯ ಭಾಲ್ಕಿ ಮತ್ತು ಆದಿತ್ಯ ಮಹಿಳಾ ಪದವಿ ಮಹಾವಿದ್ಯಾಲಯ ಭಾಲ್ಕಿ ಕಾಲೇಜುಗಳ ಸಂಯೋಜನೆ ಮುಂದುವರಿಸಲು ಅನುಮೋದಿಸಲಾಯಿತು.**

## ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ : 03*

**ವಿಷಯ:** 2017–18 ನೇ ಶೈಕ್ಷಣಿಕ ಸಾಲಿನ ವಾರ್ಷಿಕ ವೇಳಾ ಪಟ್ಟಿ ಹಾಗೂ ಸಂದಾಯಯವಾಗುವ ಶುಲ್ಕ ಸ್ನಾತಕ ಪದವಿ ಕೋರ್ಸುಗಳ ವಿದ್ಯಾರ್ಥಿನಿಯರಿಂದ ವಿಶ್ವವಿದ್ಯಾಲಯಕ್ಕೆ ಸಂದಾಯವಾಗುವ ಶುಲ್ಕದ ಬಗ್ಗೆ.

**ಉಲ್ಲೇಖ:** ಪ್ರಾಂಶುಪಾಲರು ಸಭೆಯ ದಿನಾಂಕ : 20–04–2017

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ಕೋರ್ಸುಗಳಿಗೆ ಸಂಬಂಧಿಸಿದಂತೆ, ವಾರ್ಷಿಕ ವೇಳಾ ಪಟ್ಟಿ ಹಾಗೂ ಸಂದಾಯಯವಾಗುವ ಶುಲ್ಕ ವಿದ್ಯಾರ್ಥಿನಿಯರಿಂದ ಸಂದಾಯವಾಗುವ ಶುಲ್ಕವನ್ನು ಪ್ರತಿವರ್ಷದಂತೆ ಶೇ 10% ರಷ್ಟು ಹೆಚ್ಚಿಸಿ ನಿಗದಿಪಡಿಸಿದ್ದು, ಶುಲ್ಕದ ವಿವರ ಈ ಕೆಳಗಿನಂತಿದೆ. ಸದರಿ ವಿಷಯವನ್ನು ಸಿಂಡಿಕೇಟ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**2017–18 ನೇ ಶೈಕ್ಷಣಿಕ ಸಾಲಿನ ಎಲ್ಲಾ ಸ್ನಾತಕ ಕೋರ್ಸುಗಳ ವಿಶ್ವವಿದ್ಯಾಲಯಕ್ಕೆ ಸಂದಾಯವಾಗುವ ಶುಲ್ಕದ ವಿವರ**

| ಅನಂ | ವಿವರ | ಬಿ.ಎ.ಬಿಎಸ್ಸಿ. ಬಿಎಚ್.ಎಸ್ಸಿ. ಬಿಕಾಂ ಪಥಮ ಸೆಮಿಸ್ಟರ್ | ಬಿ.ಎ.ಬಿಎಸ್ಸಿ. ಬಿಎಚ್.ಎಸ್ಸಿ. ಬಿಕಾಂ ತೃತೀಯ ಮತ್ತು ಐದನೇ ಸೆಮಿಸ್ಟರ್ | ಬಬಿಎ/ಬಿಸಿಎ/ಬಿ ಬಿಎಂ /ಬಿ.ಎಸ್ ಡಬ್ಲ್ಯೂ& ಬಿಎಫ್‌ಟಿ ಪಥಮ ಸೆಮಿಸ್ಟರ್ | ಬಬಿಎ/ಬಿಸಿಎ/ಬಿಬಿ ಎಂ /ಬಿ.ಎಸ್ ಡಬ್ಲ್ಯೂ& ಬಿಎಫ್‌ಟಿ ತೃತೀಯ ಮತ್ತು ಐದನೇ ಸೆಮಿಸ್ಟರ್ |
|---|---|---|---|---|---|
| 1 | ಅರ್ಹತಾ ಅರ್ಜಿ ಶುಲ್ಕ | 60/– | ––––– | 65/– | ––––– |
| 2 | **ಅರ್ಹತಾ ಶುಲ್ಕ ಪ್ರಥಮ ಸೆಮಿಸ್ಟರ್‌ಗೆ ಮಾತ್ರ** | –––– | ––––– | –––––– | ––––– |
| | ಅ) ರಾಜ್ಯದೊಳಗೆ | 165/– | ––––– | 352/– | ––––– |
| | ಬ) ಹೊರ ರಾಜ್ಯ | 869/– | ––––– | 3388/– ರೂ | ––––– |
| | ಕ) ಹೊರ ದೇಶದ ವಿದ್ಯಾರ್ಥಿನಿಯರಿಗೆ | 11797/– | ––––– | 23595/– | ––––– |
| 3 | ನೋಂದಣಿ ಶುಲ್ಕ ಪ್ರಥಮ ಸಮಿಸ್ಟರ್‌ಗೆ ಮಾತ್ರ | 319/- | ----- | 517/- | ----- |
| 4 | ಮುಂದುವರಿಕೆ ಶುಲ್ಕ ಮೂರನೇ ಮತ್ತು ಐದನೇ ಸಮಿಸ್ಟರ್‌ಗೆ ಮಾತ್ರ | –––– | 165/– | –––– | 181/– |
| 5 | ಕ್ರೀಡಾ ಶುಲ್ಕ ಪ್ರಥಮ, ತೃತೀಯ, & ಐದನೇ ಸೆಮಿಸ್ಟರ್ | 154/– | 154/– | 165/– | 165/– |
| 6 | ವೃತ್ತಿ ಮಾರ್ಗದರ್ಶನ ಪ್ರಥಮ, ತೃತೀಯ, & ಐದನೇ ಸೆಮಿಸ್ಟರ್ | 60/– | 60/– | 65/– | 65/– |
| 7 | ಕರಾಮವಿವಿ ವಿದ್ಯಾರ್ಥಿನಿಯರ | 60/– | 60/– | 65/– | 65/– |

| | | | | | |
|---|---|---|---|---|---|
| | ಕ್ಷೇಮ ಪಾಲನಾ ಫೀ ಪ್ರಥಮ, ತೃತೀಯ, & ಐದನೇ ಸೆಮಿಸ್ಟರ್ | | | | |
| 8 | ಟೆಲಿ ಎಜುಕೇಶನ್ | 38/- | 38/- | 38/- | 38/- |
| 9 | ಕಾರ್ಪಸ್ ಫಂಡ್ (I &II Sem Only) | 132/- | ---- | 264/- | ---- |
| 10 | ಎನ್ ಎಸ್ ಎಸ್ ಭವನ | 50/- | ---- | 50/- | ---- |
| **ರಾಜ್ಯದೊಳಗಿನ ವಿದ್ಯಾರ್ಥಿನಿಯರಿಗೆ ಒಟ್ಟು ಶುಲ್ಕ** | | **1038/-** | **477/-** | **1581/-** | **514/-** |
| **ಹೊರ ರಾಜ್ಯದ ವಿದ್ಯಾರ್ಥಿನಿಯರಿಗೆ ಒಟ್ಟು ಶುಲ್ಕ** | | **1742/-** | --- | **4617/-** | --- |
| **ಹೊರ ದೇಶದ ವಿದ್ಯಾರ್ಥಿನಿಯರಿಗೆ ಒಟ್ಟು ಶುಲ್ಕ** | | **12670/-** | --- | **24824/-** | --- |

***ನಿರ್ಣಯ: ಅನುಮೋದಿಸಲಾಯಿತು.***

**ದಿನಾಂಕ:06-09-2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

# *ಸಿಂಡಿಕೇಟ್ ಐಟಂ ಸಂಖ್ಯೆ : 04*

**ವಿಷಯ:** ಶಿಕ್ಷಣ ಹಾಗೂ ದೈಹಿಕ ಶಿಕ್ಷಣ & ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನಾಗಿ ಪ್ರೊ.ಪಿ.ಜಿ.ತಡಸದ ಅವರನ್ನು ನೇಮಕ ಮಾಡಿರುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಪ್ರೊ.ಟಿ.ಎಂ.ಗೀತಾ ನಿವೃತ್ತ ಪ್ರಾಧ್ಯಾಪಕರು. ಶಿಕ್ಷಣ ಅಧ್ಯಯನ ವಿಭಾಗ ಇವರು ದಿನಾಂಕ:07-07-2017ರಂದು 62ವರ್ಷ ಪೂರ್ಣಗೊಳಿಸಿರುವ ಪ್ರಯುಕ್ತ ದಿನಾಂಕ:31-7-2017ರಂದು ಅಪರಾಹ್ನ ಕಛೇರಿ ಅವಧಿಯ ನಂತರ ಸೇವೆಯಿಂದ ನಿವೃತ್ತಿಗೊಳಿಸಿ ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ಶಿಕ್ಷಣ ಹಾಗೂ ದೈಹಿಕ ಶಿಕ್ಷಣ & ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗಗಳ ಮುಖ್ಯಸ್ಥರ ಸಂಪೂರ್ಣ ಚಾರ್ಜನ್ನು ಪ್ರೊ.ಪಿ.ಜಿ.ತಡಸದ, ಪ್ರಾಧ್ಯಾಪಕರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಇವರಿಗೆ ವಹಿಸಿಕೊಡಲಾಗಿದೆ. ಸದರಿ ವಿಷಯವನ್ನು ಘಟನೋತ್ತರ ಮಂಜೂರಾತಿಗಾಗಿ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ: ಅನುಮೋದಿಸಲಾಯಿತು.***

**ದಿನಾಂಕ:06-09-2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

# *ಸಿಂಡಿಕೇಟ್ ಐಟಂ ಸಂಖ್ಯೆ :05*

**ವಿಷಯ:-** ಡಾ.ಹೇಮಲತಾ.ಎಚ್.ಎಂ, ಸಹಾಯಕ ಪ್ರಾಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ ಅವರಿಗೆ ಕಛೇರಿ ಆದೇಶ ಸಂಖ್ಯೆ: ಕರಾಮವಿವಿ/ಆಡಳಿತ-1/Co-rd/2016-17/1943 ದಿನಾಂಕ:27-10-2016 ಅನ್ವಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಮಂಡ್ಯ ಹೊರಾವರಣ ಕೇಂದ್ರಕ್ಕೆ 2016-17ನೇ ಶೈಕ್ಷಣಿಕ ಸಾಲಿಗೆ ನಿಯೋಜಿಸಲಾಗಿತ್ತು. ಸದರಿಯವರಿಗೆ ಈ ಶೈಕ್ಷಣಿಕ ವರ್ಷಕ್ಕೆ ಮುಂದುವರೆಸಲು ಬಗ್ಗೆ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ನಿರ್ದೇಶನಕ್ಕಾಗಿ ಮಂಡಿಸಿದೆ.

**ನಿರ್ಣಯ:– ಡಾ.ಹೇಮಲತಾ.ಎಚ್.ಎಂ, ಸಹಾಯಕ ಪ್ರಾಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ ಇವರನ್ನು ಒಂದು ವರ್ಷದ ಅವಧಿಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಮಂಡ್ಯ ಹೊರಾವರಣ ಕೇಂದ್ರಕ್ಕೆ ನಿಯೋಜನೆಯನ್ನು ಮುಂದುವರೆಸಲು ತೀರ್ಮಾನಿಸಲಾಯಿತು.**

**<u>ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ : 06*

**ವಿಷಯ:–**ದಿನಾಂಕ:14–8–2017ರಂದು ಜರುಗಿದ 48ನೇ ಹಣಕಾಸು ಸಮಿತಿ ಸಭೆಯ ನಡವಳಿಗಳು ಹಾಗೂ 2016–17ನೇ ವಾರ್ಷಿಕ ಲೆಕ್ಕಪತ್ರವನ್ನು ದಿನಾಂಕ:19–8–2017 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಮಂಡಿಸಿ ಅನುಮೋದಿಸಲಾಯಿತು. ಈಗ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಮುಂದೂಡಲಾಯಿತು.**

**<u>ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ : 07*

**ವಿಷಯ:–** ದಿನಾಂಕ:14–7–2017ರಂದು ಜರುಗಿದ ಕ್ರೀಡಾ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–ಸುದೀರ್ಘ ಚರ್ಚಿಸಿ ದಿನಾಂಕ:14–7–2017ರಂದು ಜರುಗಿದ ಕ್ರೀಡಾ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.**

**<u>ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ : 08*

**ವಿಷಯ:–** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ 2003ರ ಪ್ರಕಾರ ಕುಲಪತಿಗಳು, ಕುಲಸಚಿವರು/ಕುಲಸಚಿವರು (ಮೌಲ್ಯಮಾಪನ) ಹಾಗೂ ಆರ್ಥಿಕ ಅಧಿಕಾರಿಗಳು ಇವರುಗಳ ಕಛೇರಿಗೆ ಲಭ್ಯವಿರುವ ವಿವಿಧ ರೀತಿಯ ಸಾದಿಲ್ವಾರು ಮೊತ್ತ ಮಂಜೂರಾತಿ ಕುರಿತು. ಸದರಿ ವಿಷಯವನ್ನು ಪರಿಶೀಲಿಸಿ, ಕರ್ನಾಟಕ ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯಗಳಲ್ಲಿ ಜಾರಿಯಲ್ಲಿರುವಂತೆ ಈ ಸೌಲಭ್ಯವನ್ನು ಸದರಿ ಅಧಿಕಾರಿಗಳಿಗೆ ಮಂಜೂರಿಸುವಂತೆ, ನಿಯಮಗಳನ್ನು ಅಳವಡಿಸುವ ಕುರಿತು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ವಿಶ್ವವಿದ್ಯಾಲಯದ ವಿವಿಧ ಕಛೇರಿಗಳಿಗೆ ಗಣ್ಯರು, ವಿವಿಧ ಸಮಿತಿ, ಪ್ರಾಧಿಕಾರಗಳ ಸದಸ್ಯರುಗಳ ಕಾಲಕಾಲಕ್ಕೆ ಭೇಟಿ ನೀಡಿದಾಗ ಅತಿಥಿ ಸತ್ಕಾರ ಹಾಗೂ ಕಛೇರಿಯ ಇತರ ದೈನಂದಿನ ಖರ್ಚು**

**ವೆಚ್ಚಗಳಿಗಾಗಿ; ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ 2003ರ ಪ್ರಕರಣ 11 (2)ರ ಅಡಿಯಲ್ಲಿ ಕರ್ನಾಟಕ ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯಗಳ ನಿಯಮಗಳನ್ನು ಅನುಸರಿಸಲಾಗುತ್ತಿದ್ದು, ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಈ ಬಗ್ಗೆ ಜಾರಿಯಲ್ಲಿರುವ ನಿಯಮಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುತ್ತಿದ್ದು, ವಿಶ್ವವಿದ್ಯಾಲಯದ ಅಧಿಕಾರಿಗಳ ಕಛೇರಿ ಪ್ರತಿ ವರ್ಷ ಲಭ್ಯವಿರುವ ಈ ಕೆಳಗಿನ ಸೌಲಭ್ಯಗಳನ್ನು ನೀಡಲು ಅನುಮೋದಿಸಲಾಯಿತು.**

1) **ಕುಲಪತಿಗಳ ಕಛೇರಿ :**

| | |
|---|---|
| a) Sumptuary Allowance<br>ಸದರಿ ಲೆಕ್ಕ ಶೀರ್ಷಿಕೆಯಲ್ಲಿ (Tea/Coffee ಗಣ್ಯರ ಅತಿಥ್ಯಕ್ಕಾಗಿ) | Rs. 60,000/- |
| b) Lunch & Refreshment Allowances<br>(Lunch & Refreshments for VC's meetings) | Rs.1,00,000/- |
| c) Discretionary Contingency<br>(Gifts articles, Presentation to higher Authorities, All kinds of essential emergent expenditures) | Rs.4,00,000/- |

2) **ಕುಲಸಚಿವರ ಕಛೇರಿ :-**

| | |
|---|---|
| d) Discretionary Contingency | Rs.60,000/- |

3) **ಕುಲಸಚಿವರು (ಮೌಲ್ಯಮಾಪನ) ರವರ ಕಛೇರಿ**

| | |
|---|---|
| e) Discretionary Contingency | Rs.60,000/- |

4) **ಹಣಕಾಸು ಅಧಿಕಾರಿಗಳ ಕಛೇರಿ :-**

| | |
|---|---|
| f) Discretionary Contingency | Rs.60,000/- |

**ದಿನಾಂಕ:06-09-2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

# *ಸಿಂಡಿಕೇಟ್ ಐಟಂ ಸಂಖ್ಯೆ : 09*

**ವಿಷಯ:-** ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ ಬೇಡಿಕೆಗೆ ಅನುಗುಣವಾಗಿ ಹೆಚ್ಚುವರಿ ವಿದ್ಯಾರ್ಥಿನಿಯರ ಪ್ರವೇಶ ಪಡೆದುಕೊಂಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡಲು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದೆ.

ನಿರ್ಣಯ:- **ಔಷಧೀಯ ರಸಾಯನ ಶಾಸ್ತ್ರ ವಿಭಾಗದಿಂದ ಇಬ್ಬರು ವಿದ್ಯಾರ್ಥಿನಿಯರನ್ನು ರಸಾಯನಶಾಸ್ತ್ರ ವಿಭಾಗಕ್ಕೆ ಹಾಗೂ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದಿಂದ ಇತಿಹಾಸ ಅಧ್ಯಯನ ವಿಭಾಗಕ್ಕೆ ಒಬ್ಬ ವಿದ್ಯಾರ್ಥಿನಿಯನ್ನು ವರ್ಗಾಯಿಸಲು ಅನುಮೋದಿಸಲಾಯಿತು.**

**<u>ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

# *ಸಿಂಡಿಕೇಟ್ ಐಟಂ ಸಂಖ್ಯೆ : 10*

**ವಿಷಯ:–** ದಿನಾಂಕ:14–8–2017ರಂದು ಜರುಗಿದ ಆರೋಗ್ಯ ಕೇಂದ್ರದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:–ಸುದೀರ್ಘವಾಗಿ ಚರ್ಚಿಸಿ*** **ದಿನಾಂಕ:14–8–2017ರಂದು ಜರುಗಿದ ಆರೋಗ್ಯ ಕೇಂದ್ರದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು** ***ಅನುಮೋದಿಸಲಾಯಿತು.***

**<u>ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

# *ಸಿಂಡಿಕೇಟ್ ಐಟಂ ಸಂಖ್ಯೆ : 11*

**ವಿಷಯ:–** ದಿನಾಂಕ:14–8–2017ರಂದು ಜರುಗಿದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:–***

1. **ದಿನಾಂಕ:14–8–2017ರಂದು ಜರುಗಿದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ ಸಲಹಾ ಸಮಿತಿ ಸಭೆಯ ನಡವಳಿಗಳನ್ನು** ***ಅನುಮೋದಿಸಲಾಯಿತು.***
2. **ವಿ.ಕ್ಷೇ.ನಿ ನಡವಳಿ ಸಂಖ್ಯೆ: 4ರ 2017–18ನೆಯ ಸಾಲಿನ ಅಂತರ್ ಮಹಾವಿದ್ಯಾಲಯ ಯುವಜನಮೇಳ ಸಂಲಗ್ನ ಕಾಲೇಜುಗಳಲ್ಲಿ ಸಂಘಟಿಸಿದರೆ ಅವರಿಗೆ ರೂ.3 ಲಕ್ಷ ಅನುದಾನ ನೀಡಲು ತೀರ್ಮಾನಿಸಲಾಯಿತು.**

**<u>ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

# *ಸಿಂಡಿಕೇಟ್ ಐಟಂ ಸಂಖ್ಯೆ : 12*

**ವಿಷಯ:–** ದಿನಾಂಕ:12–07–2017ರಂದು ಜರುಗಿದ Malpractice Consideration Committee (Students) ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ: ಸುದೀರ್ಘವಾಗಿ ಚರ್ಚಿಸಿ*** **ದಿನಾಂಕ:12–07–2017ರಂದು ಜರುಗಿದ** Malpractice Consideration Committee (Students)**ಸಭೆಯ ನಡವಳಿಗಳಲ್ಲಿ ಕೆಲವೊಂದು ನ್ಯೂನತೆ ಕಂಡು ಬಂದಿದ್ದು ಅದನ್ನು ಸರಿಪಡಿಸಲು ಪರೀಕ್ಷಾ ವಿಭಾಗಕ್ಕೆ ತಿಳಿಸಲು ಸೂಚಿಸಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 01*

**ವಿಷಯ:-** ಕನ್ನಡ ಅಧ್ಯಯನ ವಿಭಾಗ ಹಾಗೂ ಶಿಕ್ಷಣ& ದೈಹಿಕ ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರ ವೇತನ ಶ್ರೇಣಿಯಲ್ಲಿ AGP ಯನ್ನು ರೂ. 7000/- ರಿಂದ 8000/-ಗಳಿಗೆ ಹೆಚ್ಚಿಸುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕನ್ನಡ ಅಧ್ಯಯನ ವಿಭಾಗ ಹಾಗೂ ಶಿಕ್ಷಣ & ದೈಹಿಕ ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರುಗಳನ್ನು ಗ್ರೇಡ್-2 ದಿಂದ ಗ್ರೇಡ್ - 3 ಯುಜಿಸಿ ನಿಯಮಾವಳಿ ಹಾಗೂ ಸಿ.ಎ.ಎಸ್‌ನ ಪರಿನಿಯಮಾವಳಿ ಅನ್ವಯ ಪರಿಶೀಲಿನಾ ಸಮಿತಿ ರಚಿಸಲಾಗಿದ್ದು. ಸದರಿ ಸಮಿತಿಯವರು ದಿನಾಂಕ: 28-8-2017 & ದಿನಾಂಕ:4-9-2017 ರಂದು ಸಂದರ್ಶನವನ್ನು ಜರುಗಿಸಿ Sealed Coverನಲ್ಲಿ ನಡವಳಿಗಳನ್ನು ಸಲ್ಲಿಸಿರುತ್ತಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ.

**ನಿರ್ಣಯ:- ಈ ಕೆಳಗೆ ಸೂಚಿಸಿರುವ ಆರು ಜನ ಸಹಾಯಕ ಪ್ರಾಧ್ಯಾಪಕರನ್ನು ಅವರು ಅರ್ಹರಾದ ದಿನಾಂಕದಿಂದ ಗ್ರೇಡ್-2 ದಿಂದ ಗ್ರೇಡ್ - 3(7000ದಿಂದ 8000ಕ್ಕೆ) ಬಡ್ತಿ ನೀಡಲು ಅನುಮೋದಿಸಲಾಯಿತು.**

| ಕ್ರ.ಸಂ | ಹೆಸರು | ಪರಿಶೀಲಿನಾ ಸಮಿತಿ ಸಭೆ ಜರುಗಿದ ದಿನಾಂಕ | ಸಿ.ಎ.ಎಸ್ ಅಡಿಯಲ್ಲಿ ಎಜಿಪಿಗೆ ಅರ್ಹರಾದ ದಿನಾಂಕ | ಸಿಂಡಿಕೇಟ್ ಸಭೆಯ ನಿರ್ಣಯ |
|---|---|---|---|---|
| 1. | ಡಾ.ನಾರಾಯಣ ಬಿ ಪವಾರ ಸಹಾಯಕ-ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಅಮವಿವಿ | 28-8-2017 | 30-11-2016 | ಅನುಮೋದಿಸಲಾಯಿತು |
| 2. | ಡಾ.ನಾಗರಾಜ.ಎಂ, ಸಹಾಯಕ-ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಅಮವಿವಿ | 28-8-2017 | 30-11-2016 | ಅನುಮೋದಿಸಲಾಯಿತು |
| 3. | ಡಾ.ವೆಂಕೋಬಾ ನಾರಾಯಣಪ್ಪ ಸಹಾಯಕ-ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ಅಮವಿವಿ | 28-8-2017 | 12-10-2016 | ಅನುಮೋದಿಸಲಾಯಿತು |
| 4. | ಡಾ.ಅಶೋಕಕುಮಾರ ಸುರಪುರ ಸಹಾಯಕ-ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ಅಮವಿವಿ | 28-8-2017 | 20-7-2017 | ಅನುಮೋದಿಸಲಾಯಿತು |
| 5. | ಡಾ. ರಾಜಕುಮಾರ ಮಾಲಿಪಾಟೀಲ, ಸಹಾಯಕ-ಪ್ರಾಧ್ಯಾಪಕರು, ದೈಹಿಕ- ಶಿಕ್ಷಣ ಅಧ್ಯಯನ ವಿಭಾಗ, ಅಮವಿವಿ | 4-9-2017 | 5-12-2016 | ಅನುಮೋದಿಸಲಾಯಿತು |
| 6. | ಡಾ. ಸಂಕ್ಪಾಲ್ ಹೂವಣ್ಣ, ಸಹಾಯಕ-ಪ್ರಾಧ್ಯಾಪಕರು, ದೈಹಿಕ- ಶಿಕ್ಷಣ ಅಧ್ಯಯನ ವಿಭಾಗ, ಅಮವಿವಿ | 4-9-2017 | 30-1-2017 | ಅನುಮೋದಿಸಲಾಯಿತು |

## *ಸಿಂಡಿಕೇಟ್ ಪುರವಣಿ ಸಂಖ್ಯೆ : 02*

Sub: CAS under promotion from Associate Professor to Professor of MBA and Commerce Dept as per the UGC Regulation, 2010 and G.O.No:ED 26MVV,dated 15.11.2011 reg.

Ref: BOA meeting and Screening Committee proceedings were held on 28th Aug 2017.

With reference to the above citied subject, the proposals submitted by following teaching staff applications were scrutinized by IQAC based on the UGC regulations 2010 (UGC Regulations on Minimum Qualifications for Appointment of Teachers and other Academic Staff in Universities and Colleges and Measures for the Maintenance of Standards in Higher Education 2010-Published in the Gazette of India, September 18th, 2010 and the University CAS Regulations. Further the interviews conducted for the Posts through BOA which was held on 28th Aug 2017. The recommendation made by BOA which is in a sealed cover is placed before syndicate for taking final decision in the matter.

**ನಿರ್ಣಯ:- ಈ ಕೆಳಗೆ ಸೂಚಿಸಿರುವ ಇಬ್ಬರು ಸಹ-ಪ್ರಾಧ್ಯಾಪಕರನ್ನು ಅವರು ಅರ್ಹರಾದ ದಿನಾಂಕದಿಂದ ಪ್ರಾಧ್ಯಾಪಕರಾಗಿ ಬಡ್ತಿ ನೀಡಲು ಅನುಮೋದಿಸಲಾಯಿತು.**

| ಕ್ರ.ಸಂ | ಹೆಸರು | ಪರಿಶೀಲಿನಾ ಸಮಿತಿ ಸಭೆ ಜರುಗಿದ ದಿನಾಂಕ | ಸಿ.ಎ.ಎಸ್ ಅಡಿಯಲ್ಲಿ ಪ್ರಾಧ್ಯಾಪಕರಾಗಿ ಅರ್ಹರಾದ ದಿನಾಂಕ | ಸಿಂಡಿಕೇಟ್ ಸಭೆಯ ನಿರ್ಣಯ |
|---|---|---|---|---|
| 1. | ಡಾ.ಸಂಜೀವಕುಮಾರ.ಕೆ.ಎಂ, ಸಹ-ಪ್ರಾಧ್ಯಾಪಕರು, ಎಂ.ಬಿ.ಎ ಅಧ್ಯಯನ ವಿಭಾಗ, ಅಮವಿವಿ | 28-8-2017 | 29-10-2015 | ಅನುಮೋದಿಸಲಾಯಿತು |
| 2. | ಡಾ.ಮಲ್ಲಿಕಾರ್ಜುನ್.ಎನ್,.ಎಲ್ ಸಹ-ಪ್ರಾಧ್ಯಾಪಕರು, ಎಂ.ಬಿ.ಎ ಅಧ್ಯಯನ ವಿಭಾಗ, ಅಮವಿವಿ | 28-8-2017 | 21-3-2016 | ಅನುಮೋದಿಸಲಾಯಿತು |

ದಿನಾಂಕ:06-09-2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಪುರವಣಿ ಸಂಖ್ಯೆ : 03*

**ವಿಷಯ:-** ಒಂದು ಹೊಸ ಸಮಿತಿಯನ್ನು ರಚಿಸಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ/ ಬಾಹ್ಯಮೂಲ/ ಗುತ್ತಿಗೆ/ ದಿನಗೂಲಿ/ ಪಿಡಬ್ಲ್ಯೂಜಿ 1&2 ಸ್ಪಷ್ಟತೆಯನ್ನು ಪಡೆಯುವ ಕುರಿತು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅಮನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಸುದೀರ್ಘವಾಗಿ ಚರ್ಚಿಸಿ ಈ ಕೆಳಕಂಡ ಸದಸ್ಯರನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಸಿಂಡಿಕೇಟ್ ಪ್ರತಿನಿಧಿಗಳಾದ ಶ್ರೀಮತಿ ಅನಘಾ ಲಿಮಯೆ, ಶ್ರೀ.ರವೀಂದ್ರ ಭಾವಿಕಟ್ಟಿ ಮತ್ತು ಶ್ರೀ ನಾನಾಗೌಡ ಹಿಪ್ಪರಗಿ ಇವರ ಹೆಸರುಗಳನ್ನು ಸೂಚಿಸಲಾಯಿತು.**

1. ಸಿಬ್ಬಂದಿ ಮತ್ತು ಆಡಳಿತ್ಮಾತಕ ಸುಧಾರಣೆಗಳ ಇಲಾಖೆ ಸಿಬ್ಬಂದಿ – ಅಧ್ಯಕ್ಷರು
2. ಒಬ್ಬ ಸಿಂಡಿಕೇಟ್ ಸದಸ್ಯ – ಸದಸ್ಯರು
3. ಕುಲಸಚಿವರು – ಸದಸ್ಯ-ಸಂಚಾಲಕರು

**ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 04*

**ವಿಷಯ: ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಬೋಧಕ ಹುದ್ದೆಗಳ ನೇರ ನೇಮಕಾತಿ ಕುರಿತು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ.**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ಇಡಿ 136 ಯುಎನ್ಇ 2017, ದಿನಾಂಕ:17–07–2017ರನ್ವಯ ಬೋಧಕ ಬೋಧಕೇತರ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ರೂಪಿಸಲಾಗಿರುವ ಪರಿನಿಯಮಾವಳಿಗಳನ್ನು ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಹಾಗೂ ಸರ್ಕಾರದ ಮಾರ್ಗಸೂಚಿಯನ್ನು ಪರಿನಿಯಮಾವಳಿಗಳಲ್ಲಿ ಅಳವಡಿಸಲು ಸೂಚಿಸಲಾಗಿದೆ.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಬೋಧಕ ಹುದ್ದೆಗಳ ಪರಿನಿಯಮಾವಳಿಗಳು ಅನುಮೋದನೆಗೊಂಡಿದ್ದು, ವಿಶ್ವವಿದ್ಯಾಲಯ ಧನಸಹಾಯ ಆಯೋಗ ಹಾಗೂ ರಾಜ್ಯ ಸರ್ಕಾರದ ಮಾರ್ಗಸೂಚಿ/ಮಾನದಂಡಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ಆದ್ದರಿಂದ ಬೋಧಕ ಹುದ್ದೆಗಳ ನೇಮಕಾತಿಗೆ ಸಂಬಂಧಪಟ್ಟ ಸರ್ಕಾರದ ಸುತ್ತೋಲೆ ದಿನಾಂಕ:17–07–2017, ಸಂಖ್ಯೆ: ಇಡಿ 136 ಯುಎನ್ಇ 2017 ಅನ್ನು ವಿಶ್ವವಿದ್ಯಾನಿಲಯದ ಪರಿನಿಯಮಾವಳಿಗಳಲ್ಲಿ ಅಳವಡಿಸಿಕೊಳ್ಳಲು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಬೋಧಕ ಹುದ್ದೆಗಳ ನೇಮಕಾತಿಗೆ ಸಂಬಂಧಪಟ್ಟ ಸರ್ಕಾರದ ಸುತ್ತೋಲೆ ದಿನಾಂಕ:17–07–2017, ಸಂಖ್ಯೆ: ಇಡಿ 136 ಯುಎನ್ಇ 2017 ಅನ್ನು ವಿಶ್ವವಿದ್ಯಾನಿಲಯದ ಪರಿನಿಯಮಾವಳಿಗಳಲ್ಲಿ ಅಳವಡಿಸಿಕೊಳ್ಳಲು ಅನುಮೋದಿಸಲಾಯಿತು.**

**ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 05*

**ವಿಷಯ: ಬೋಧಕೇತರ ಹುದ್ದೆಗಳ ನೇರ ನೇಮಕಾತಿ ಕುರಿತು ಸರ್ಕಾರದ ಮಾರ್ಗಸೂಚಿಗಳನ್ನು ಪರಿನಿಯಮಾವಳಿಗಳಲ್ಲಿ ಅಳವಡಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ.**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ಇಡಿ 136 ಯುಎನ್ಇ 2017, ದಿನಾಂಕ:17–07–2017ರನ್ವಯ ಬೋಧಕ ಬೋಧಕೇತರ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ರೂಪಿಸಲಾಗಿರುವ ಪರಿನಿಯಮಾವಳಿಗಳನ್ನು ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಹಾಗೂ ಸರ್ಕಾರದ ಮಾರ್ಗಸೂಚಿಯನ್ನು ಪರಿನಿಯಮಾವಳಿಗಳಲ್ಲಿ ಅಳವಡಿಸಲು ಸೂಚಿಸಲಾಗಿದೆ.

ಈ ಹಿಂದೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಬೋಧಕೇತರ ಹುದ್ದೆಗಳ ಪರಿನಿಯಮಾವಗಳಿಗಳನ್ನು ವಿವಿಧ ಪ್ರಾಧಿಕಾರಿಗಳಿಂದ ಅನುಮೋದನೆ ಪಡೆದು, ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಅದರಲ್ಲಿ ತಾತ್ಕಾಲಿಕ ಸಿಬ್ಬಂದಿಗಳನ್ನು ವಿಲೀನಗೊಳಿಸುವ ಕುರಿತು ಸೇರ್ಪಡೆ ಮಾಡಿರುವ ನಿಯಮ 3(ii), (v), (vi) ಹಾಗೂ (vii) ಗಳಿಂದ ಸರ್ಕಾರದಿಂದ ಅನುಮೋದನೆಗೊಳ್ಳದೇ ಇರುವುದರಿಂದ ಇವುಗಳನ್ನು ತೆಗೆದುಹಾಕಿ ಮತ್ತು ಸರ್ಕಾರದ ಸುತ್ತೋಲೆ ದಿನಾಂಕ:17–07–2017, ಸಂಖ್ಯೆ:ಇಡಿ 136 ಯುಎನ್ಇ

2017ರಲ್ಲಿ ಸೂಚಿಸಿದ ಮಾರ್ಗಸೂಚಿಗಳನ್ನು ಪರಿನಿಯಮಾವಳಿಗಳಲ್ಲಿ ಅಳವಡಿಸಿ ಹಾಗೂ ನಿಯಮ 3 (iv)ರಲ್ಲಿ ಈ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ನೇಮಕಾತಿಗಾಗಿ ಒಂದು ಪ್ರತ್ಯೇಕ ನಿಯಮಾವಳಿಗಳನ್ನು (Ordinance) ಸಿದ್ದಪಡಿಸಲು ಹಾಗೂ 3(v)ರಲ್ಲಿ ಸೇವಾನಿರತ ಅಭ್ಯರ್ಥಿಗಳ ಸಂಬಂಧದಲ್ಲಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಿಗುಣವಾಗಿ ಅವಕಾಶ ಕಲ್ಪಿಸಿ, ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:- **ಬೋಧಕೇತರ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಪಟ್ಟಂತೆ ಸರ್ಕಾರದ ಸುತ್ತೋಲೆ ದಿನಾಂಕ:17-07-2017, ಸಂಖ್ಯೆ:ಇಡಿ 136 ಯುಎನ್ಇ 2017ರಲ್ಲಿ ಸೂಚಿಸಿದ ಮಾರ್ಗಸೂಚಿಗಳನ್ನು ಪರಿನಿಯಮಾವಳಿಗಳಲ್ಲಿ ಅಳವಡಿಸಿ ಹಾಗೂ ನಿಯಮ 3 (iv)ರಲ್ಲಿ ಈ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ನೇಮಕಾತಿಗಾಗಿ ಒಂದು ಪ್ರತ್ಯೇಕ ನಿಯಮಾವಳಿಗಳನ್ನು (Ordinance) ಸಿದ್ದಪಡಿಸಲು ಹಾಗೂ 3(v)ರಲ್ಲಿ ಸೇವಾನಿರತ ಅಭ್ಯರ್ಥಿಗಳ ಸಂಬಂಧದಲ್ಲಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಿಗುಣವಾಗಿ ಅವಕಾಶ ಕಲ್ಪಿಸಿ, ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲು ಚರ್ಚಿಸಿ ಅನುಮೋದಿಸಲಾಯಿತು.**

**<u>ದಿನಾಂಕ:06-09-2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 06*

**ವಿಷಯ:** ದಿನಾಂಕ:1-9-2017ರಂದು ಜರುಗಿದ ಕಟ್ಟಡ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:- **ಸುದೀರ್ಘವಾಗಿ ಚರ್ಚಿಸಿ ಕಟ್ಟಡ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.**

**<u>ದಿನಾಂಕ:06-09-2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 07*

**ವಿಷಯ:** ದಿನಾಂಕ:12-7-2017ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿದಂತೆ, ಟೆಂಡರ ಪ್ರಕ್ರಿಯೆ ಪ್ರಾರಂಭಿಸಲು ಮಾನ್ಯ ಕುಲಸಚಿವರು(ಮೌ) ಇವರಿಗೆ ಸೂಚಿಸಿದಂತೆ 2017 ಸೆಪ್ಟಂಬರ್ ಮೊದಲನೇ ವಾರದಲ್ಲಿ outsource ಮುಖಾಂತರ Short term tender for Examination process Management System ಕರೆಯಲು ದಾಖಲೆಗಳನ್ನು ತಯಾರಿಸಿದ್ದು, ಟೆಂಡರ ಕರೆಯುವ ಪ್ರಕ್ರಿಯ ಅಥವಾ ಅಧಿಸೂಚನೆ ಹೊರಡಿಸುವ ಕುರಿತು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:- **Outsource ಮುಖಾಂತರ** Short term tender for Examination process Management System **ಕುರಿತು ಟೆಂಡರ ಕರೆಯುವ ಪ್ರಕ್ರಿಯೆ ಅಥವಾ ಅಧಿಸೂಚನೆ ಹೊರಡಿಸಲು ಅನುಮೋದಿಸಲಾಯಿತು.**

**ಸಿಂಡಿಕೇಟ್ ಸದಸ್ಯರಾದ ಅನಘಾ ಲಿಮಯೆ ಅವರು ಈ ಮೇಲಿನ ವಿಷಯ ಕುರಿತು(ಪುರವಾಣಿ ಸಂಖ್ಯೆ:7ರ) ದಿನಾಂಕ:8-9-2017 ರಂದು ಪತ್ರ ಸಲ್ಲಿಸಿರುತ್ತಾರೆ ಪತ್ರದ ಪ್ರತಿ ಲಗತ್ತಿಸಿದೆ.**

## ದಿನಾಂಕ:06-09-2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಪುರವಣಿ ಸಂಖ್ಯೆ : 08*

ವಿಶ್ವವಿದ್ಯಾನಿಲಯದ ವಿವಿಧ ಶಾಖಾ ಕಛೇರಿ/ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕೇತರ ಸಿಬ್ಬಂದಿಗಳ ಇ.ಪಿ.ಎಫ್ ಲೆಕ್ಕಾಚಾರ ತಖ್ತೆಯ 2003-04 ರಿಂದ ಸಪ್ಟೆಂಬರ್-2014 ರ ವರೆಗಿನ ವಿವರ.

| Sl.no | Particulars | No of Employees | Total Wages Drawn | Employee Share 12% | Employer Share 13.61 | Total EPF |
|---|---|---|---|---|---|---|
| 1 | Consolidated & Out Source Staff | 127 | 71601887 | 8524892 | 9745018 | 18269910 |
| 2 | Honorarium Staff | 04 | 1506132 | 180736 | 204985 | 385721 |
| 3 | PWG-34 Staff | 43 | 2674856 | 320983 | 364048 | 685031 |
| | Total | 174 | 75782875 | 9026611 | 10314051 | 19340662 |

ಇ.ಪಿ.ಎಫ್ ತಖ್ತೆಯ ಆಧಾರಸಿ ಇ.ಪಿ.ಎಫ್ ಭರಣಾ ಮಾಡಬೇಕಾದ ಮೊತ್ತ ರೂ, **90,26,611/-** ಗಳಿದ್ದು, ಸದರಿ ಮೊತ್ತವನ್ನು ಸಿಬ್ಬಂದಿಗಳು ತಮ್ಮ ಕೈಯಿಂದ ಭರಣಾ ಮಾಡಲು ಆಗುವುದಿಲ್ಲ ಎಂದು ತಿಳಿಸಿದ ಕಾರಣ ವಿಶ್ವವಿದ್ಯಾನಿಲಯದಿಂದ Loan ಮುಖಾಂತರ ಹಣವನ್ನು ಸಿಬ್ಬಂದಿಗಳಿಗೆ ನೀಡಲು ವಿನಂತಿಸಿದ್ದಾರೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಇ.ಪಿಎಫ್ ಭರಣಾ ಮಾಡಬೇಕಾದ ಮೊತ್ತ ರೂ, 90,26,611/- ವನ್ನು ವಿಶ್ವವಿದ್ಯಾನಿಲಯದಿಂದ Loan ಮುಖಾಂತರ ಸಿಬ್ಬಂದಿಗಳಿಗೆ ನೀಡಲು ಅನುಮೋದಿಸಲಾಯಿತು. ಹಾಗೂ ಉಳಿದ ಹಣವನ್ನು ವಿಶ್ವವಿದ್ಯಾನಿಲಯ 13.61%ನ್ನು ತುಂಬಲು ನಿರ್ಧರಿಸಲಾಯಿತು.**

## ದಿನಾಂಕ:06-09-2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಪುರವಣಿ ಸಂಖ್ಯೆ : 09*

Sub: Establishment of National Academic Depository(NAD) Cell at Akkamahadevi Women's University, Vijayapura-regarding.
Ref: No: F.1-1/2016 (NAD), dated 14th July 2017.

In pursuance of the UGC letter mentioned in above reference, it is expected to establish a National Academic Depository (NAD) Cell at the University and also expected to enter into a Service Level Agreement (SLA) with Digital Depositories in NAD (Copy of the agreement template enclosed) with. Further, as per the UGC D.O. No.1-10/2017 (JS/NAD)August 2017, a Nodal Officer need to be appointed and to be informed to UGC. Therefore as per the order No:AWUV/PMEB/NAD/2017-18/91, dated 05-09-

2017 Dr.S.A.Kazi, Professor & Chairman, Department of Social Work and the Director, PMEB has been appointed as Nodal Officer for NAD Cell of Akkamahadevi Women's University, Vijayapura.

This is placed before Syndicate for its perusal and approval.

ನಿರ್ಣಯ:- National Academic Depository(NAD) Cell ಸ್ಥಾಪಿಸಿದ್ದಕ್ಕಾಗಿ ಹಾಗೂ ಸದರಿ ಕೋಶಕ್ಕೆ ಪ್ರೊ..ಎಸ್.ಎ.ಖಾಜಿ, ಪ್ರಾಧ್ಯಾಪಕರು ಸಮಾಜಕಾರ್ಯ ಅಧ್ಯಯನ ವಿಭಾಗ & ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮೌಲ್ಯಮಾಪನ ಮಂಡಳಿ ಅವರನ್ನು ನೋಡಲ್ ಆಫೀಸರ್ ಎಂದು ನೇಮಕ ಮಾಡಿರುವ ವಿಷಯಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

**ದಿನಾಂಕ:06-09-2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

# ಸಿಂಡಿಕೇಟ್ ಪುರವಣಿ ಸಂಖ್ಯೆ : 10

Sub: Creation of Supernumerary seats for the students of Jammu and Kashmir for admission to both PG and UG Course of University and its affiliated colleges.

Ref: UGC D.O.No: F.14-13/2013 (CPP-II) dated 13-07-2017

With reference to the above, the UGC has issued a letter to create 2 (two) supernumerary seats for students of Jammu and Kashmir for admission to both PG and UG Course in the University as well as its affiliated colleges from the current academic year. Hence it is placed before Syndicate for its perusal and approval.

ನಿರ್ಣಯ:- ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಪತ್ರ ಸಂಖ್ಯೆ UGC D.O.No: F.14-13/2013 (CPP-II) dated 13-07-2017 ಅನ್ವಯ ಕ್ರಮಜರುಗಿಸಲು ತೀರ್ಮಾನಿಸಲಾಯಿತು.

**ದಿನಾಂಕ:06-09-2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

# ಸಿಂಡಿಕೇಟ್ ಪುರವಣಿ ಸಂಖ್ಯೆ : 11

**ವಿಷಯ:** 2017-18ನೇ ಸಾಲಿಗಾಗಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ, ಬಿ.ಪಿಎಡ್, (ರೂ.50/- ಎನ್.ಎಸ್.ಎಸ್. ಬಿಲ್ಡಂಗ್ ಶುಲ್ಕ), ಸ್ನಾತಕೋತ್ತರ, ಡಿಪ್ಲೋಮಾ & ಸರ್ಟಿಫಿಕೇಟ್ ಕೋರ್ಸ್, ಬಾಹ್ಯಮೂಲ ಸ್ಕೀಮ್ ವಲಸೆ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣ ಪತ್ರಗಳ ಶುಲ್ಕಗಳನ್ನು ಶೇ 10% ಹೆಚ್ಚುಗೊಳಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:- ಅನುಮೋದಿಸಲಾಯಿತು.

**<u>ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 12*

**ವಿಷಯ:–** ದಿನಾಂಕ: 4–9–2017 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಸುದೀರ್ಘವಾಗಿ ಚರ್ಚಿಸಿ ದಿನಾಂಕ: 4–9–2017 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.**

**<u>ದಿನಾಂಕ:06–09–2017ರಂದು ಜರುಗಿದ 100ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 13*

**ವಿಷಯ:–** ಡಾ.ಶ್ರೀನಿವಾಸ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ ಇವರು ಸಂಶೋಧನಾ ಮಾರ್ಗದರ್ಶನಕ್ಕೆ ಅನುಮತಿ ನೀಡುವುದರ ಕುರಿತು ದಿನಾಂಕ 19–8–2017ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದಿಸಲಾಗಿದ್ದು ಈಗ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:* **ಡಾ.ಶ್ರೀನಿವಾಸ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ ಇವರು ಸಂಶೋಧನಾ ಮಾರ್ಗದರ್ಶನಕ್ಕೆ ಅನುಮತಿ ನೀಡಲು** ***ಒಪ್ಪಿಕೊಳ್ಳಲಾಯಿತು.***

**ಕುಲಸಚಿವರು(ಮೌ) ಪ್ರೊ.ವಿ.ವಿ.ಮಳಗಿ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**ಕುಲಪತಿಗಳು(ಪ್ರಭಾರ) ಹಾಗೂ ಸಭಾಧ್ಯಕ್ಷರು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

Mail: 08.09.2017

ದಿನಾಂಕ: 08-09-2017

ಗೆ,

ಕುಲಸಚಿವರು
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ

ಮಾನ್ಯರೆ,

ವಿಷಯ: ದಿನಾಂಕ: 06-09-2017ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ನಾನು ಚರ್ಚಿಸಿದ ವಿಷಯವನ್ನು ನಡಾವಳಿಯಲ್ಲಿ ದಾಖಲಿಸುವ ಕುರಿತು

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 06-09-2017ರಂದು ಜರುಗಿದ ಸಿಂಡಿಕೇಟ್ ಸಭೆಯ ಪ್ರಾರಂಭದಲ್ಲಿ ಈ ಸಭೆಯಲ್ಲಿ ಮಂಡಿಸಲು ನಾನು ದಿ: 20-08-2017ರಂದು ಸಲ್ಲಿಸಿದ ಅಜೆಂಡಾ,

"ಲಾಜಿಸಿಸ್ ಸಂಸ್ಥೆಯೊಂದಿಗೆ ವಿಶ್ವವಿದ್ಯಾಲಯವು ಪರೀಕ್ಷಾ ಕಾರ್ಯಗಳಿಗಾಗಿ ಮಾಡಿಕೊಂಡ 2 ವರ್ಷಗಳ ದುಬಾರಿ ಮೊತ್ತದ ಒಡಂಬಡಿಕೆ 2016ರಲ್ಲಿಯೇ ಮುಗಿದಿರುವುದರಿಂದ, ಆದಾಗ್ಯೂ ಸರಕಾರದ ಆದೇಶಕ್ಕೆ ವಿರುದ್ಧವಾಗಿ ಸಿಂಡಿಕೇಟ್ ಸಭೆಯಲ್ಲಿ ವಿನಂತಿಸಿ 2017 ಎಪ್ರಿಲ್/ಮೇ ಪರೀಕ್ಷೆಗೆ ಒಡಂಬಡಿಕೆಯನ್ನು ಮುಂದುವರೆಸಿರುವುದರಿಂದ ಅದನ್ನು ಅಲ್ಲಿಗೆ ಮುಕ್ತಾಯಗೊಳಿಸಬೇಕು. ಯಾವುದೇ ಕಾರಣಕ್ಕೂ ಒಡಂಬಡಿಕೆಯನ್ನು ಮುಂದುವರೆಸದೆ ವಿಶ್ವವಿದ್ಯಾಲಯ ಮೊದಲು ನಡೆಸಿಕೊಂಡು ಬಂದ ಮಿತವ್ಯಯದ ಪರೀಕ್ಷಾ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗಲು ತಕ್ಷಣದ ಕ್ರಮ ಕೈಗೊಳ್ಳಬೇಕು". ಇದನ್ನು ದಾಖಲಿಸಿದೇ ಇರುವ ಬಗ್ಗೆ ಪ್ರಸ್ತಾಪಿಸಿದ್ದೆ. ಈಗಲಾದರೂ ಪ್ರಸ್ತಾಪಿಸಿದ ಈ ವಿಷಯವನ್ನು ನಡಾವಳಿಯಲ್ಲಿ ದಾಖಲಿಸಬೇಕೆಂದು ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಕೋರುತ್ತೇನೆ.

ಅಲ್ಲದೆ, "ಪರೀಕ್ಷಾ ಸಾಫ್ಟವೇರ್ ಸಲುವಾಗಿ ಟೆಂಡರ್ ಕರೆಯುವ ಬಗ್ಗೆ ಸಾಕಷ್ಟು ಚರ್ಚೆಯಾಗಿದ್ದು, ಕೇವಲ ಒಂದೇ ಸಂಸ್ಥೆ (ಸಿಂಗಲ್ ಟೆಂಡರ್) ಮಾತ್ರ ತಾಂತ್ರಿಕ ಅರ್ಹತೆ ಪಡೆಯುವ ಹಾಗೆ ಕರಾರು ವಿಧಿಸಬಾರದು ಮತ್ತು ಕನಿಷ್ಠ ಎರಡು ಸಂಸ್ಥೆಗಳಾದರೂ ತಾಂತ್ರಿಕ ಅರ್ಹತೆ ಪಡೆದರೆ ಮಾತ್ರ ಆರ್ಥಿಕ ಬಿಡ್ ತೆರೆಯಬೇಕು." ನನ್ನ ಈ ಅಭಿಪ್ರಾಯವನ್ನು ಸದರಿ ಸಿಂಡಿಕೇಟ್ ಸಭೆಯ ನಡಾವಳಿಯಲ್ಲಿ ದಾಖಲಿಸಬೇಕೆಂದು ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
[signature]
ಅನಘಾ ಅಮಯೆ

VC 12/9
Syndicate
8/9
188 17/9

ಕುಲಸಚಿವರ ಕಾರ್ಯಾಲಯ
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

| V. C. Office | Exam Section | Finance Section | Admn Section | Aca. Section | Engg. Section |
|---|---|---|---|---|---|
| Store Section | Letter No. 3517 | 11/9/17 | | | Inr. Clerk |
| | Registrar Sign. | | | | |